# ಅಮೀರ್ ಭೂಗತ!



**ಬಾ**ಲಿವುಡ್‌ನಲ್ಲಿ ಅತ್ಯಂತ ಹೆಚ್ಚು ಸಂಭಾವನೆ ಪಡೆಯುತ್ತಿರುವ ನಟ ಯಾರು.. ಎಂದು ಕೇಳಿದರೆ ಉದ್ಯಮದ ಒಳಗಿನವರು ಈಗಲೂ ಅಮೀರ್ ಖಾನ್ ಹೆಸರನ್ನೇ ಹೇಳುತ್ತಾರೆ. ಸಲ್ಮಾನ್ ಖಾನ್ ಮತ್ತು ಶಾರೂಕ್ ಖಾನ್ ಎಷ್ಟೇ ಅಬ್ಬರದ ಪ್ರಚಾರ ಮಾಡಿದರೂ, ಅಮೀರ್‌ನ ಒಂದು ಸಿನಿಮಾ ತೆರೆ ಕಂಡರೆ ಸಾಕು, ಉಳಿದಿಬ್ಬರು ಖಾನ್‌ಗಳ ಪ್ರಚಾರದ ಅಬ್ಬರವೆಲ್ಲ ಉಡುಗಿ ಹೋಗುತ್ತದೆ. ಅಮೀರ್‌ನದ್ದು ತಕ್ಷಣದ ಜನಪ್ರಿಯತೆ ಮಾತ್ರವಲ್ಲ, ಅಮೀರ್‌ಖಾನ್‌ನ ಸಿನಿಮಾ ತೆರೆ ಕಂಡ ವರ್ಷಗಳ ಬಳಿಕವೂ ಅದರ ಬಗ್ಗೆ ಚರ್ಚೆ ನಡೆಯುತ್ತಲೇ ಇರುತ್ತದೆ. ಅದು ಸಣ್ಣ ಬಜೆಟ್ಟೇ ಇರಲಿ, ದೊಡ್ಡದೇ ಇರಲಿ– ಅಮೀರ್ ಚಿತ್ರಗಳು ಪ್ರೇಕ್ಷಕರ ಅಚ್ಚುಮೆಚ್ಚಿನವಾಗೇ ಉಳಿದುಬಿಡುತ್ತವೆ. ಚಿತ್ರದ ಬಜೆಟ್‌ಗಿಂತ ಹೆಚ್ಚಾಗಿ ಸ್ಕ್ರಿಪ್ಟ್‌ನ ಗುಣಮಟ್ಟಕ್ಕೆ ಹೆಚ್ಚು ಒತ್ತು ಕೊಡುವಾತ ಅಮೀರ್.

ಅದು ಸಿನಿಮಾ ಎಂದಲ್ಲ, ಅಮೀರ್ ಏನನ್ನೇ ಮಾಡುವುದಿದ್ದರೂ ಅದರಲ್ಲಿ ಪರಿಪೂರ್ಣತೆ ಸಾಧಿಸಲು ಯತ್ನಿಸುತ್ತಾನೆ. ಅದಕ್ಕೆಂದೇ ಬಾಲಿವುಡ್‌ನಲ್ಲಿ ಆತನಿಗೆ ಇಟ್ಟಿರುವ ಹೆಸರು 'ಮಿಸ್ಟರ್ ಪರ್ಫೆಕ್ಷನಿಸ್ಟ್'. ಈಗ ಮೊದಲ ಬಾರಿಗೆ ಸ್ಟಾರ್ ಪ್ಲಸ್ ಚಾನೆಲ್‌ಗಾಗಿ ಟೀವಿ ರಿಯಾಲಿಟಿ ಷೋ ಒಂದನ್ನು ನಿರ್ಮಿಸುತ್ತಿರುವ ಅಮೀರ್‌ಖಾನ್ ತನ್ನ ಹೊಸ ಕೆಲಸದಲ್ಲಿ ಎಷ್ಟೊಂದು ತನ್ಮಯನಾಗಿ ಮುಳುಗಿದ್ದಾನೆಂದರೆ, ಕಳೆದ 3–4 ತಿಂಗಳಿಂದ ಆತ ಹೊರ ಜಗತ್ತಿನ ಸಂಪರ್ಕವನ್ನೇ ಕಡಿದುಕೊಂಡಿದ್ದಾನಂತೆ. ಆತನ ಕೈಯಲ್ಲಿ ಮೊಬೈಲ್ ಇಲ್ಲ– ಇಮೇಲ್ ಅಕೌಂಟ್ ಕ್ಲೋಸ್ ಆಗಿದೆ. ಯಾವ ಗೆಳೆಯರಿಗೂ ಆತ ಸಿಗುತ್ತಿಲ್ಲ! ಹೊಸ ಟೀವಿ ಷೋ ಬಗ್ಗೆ ಬಿಟ್ಟರೆ ಬೇರೆ ಯಾವುದರ ಬಗ್ಗೆಯೂ ಆತ ಮಾತನಾಡುತ್ತಿಲ್ಲವಂತೆ!

'ನಿಜಕ್ಕೂ ವೃತ್ತಿಪರತೆ ಎಂದರೆ ಇದೇ. ಅದನ್ನು ಅಮೀರ್‌ನಿಂದ ಕಲಿಯಬೇಕು' ಎಂದು ಬಾಲಿವುಡ್ ಹಾಡಿ ಹೊಗಳುತ್ತಿದೆ. ಹಾಗೆ ನೋಡಿದರೆ ಅಮೀರ್ ಹಿಂದೆಯೂ ಮೊಬೈಲ್ ಫೋನ್ ಬಗ್ಗೆ ಅಂತಹ ಒಲವು ಇಟ್ಟುಕೊಂಡವನಲ್ಲ. ಬಾಲಿವುಡ್ ಚಿಲ್ಲಾರಿ ಸ್ಟಾರ್‌ಗಳೆಲ್ಲ ದುಬಾರಿ ಮೊಬೈಲ್ ಖರೀದಿಸಿದ್ದರೂ ಅಮೀರ್ 2008ರವರೆಗೆ ಮೊಬೈಲ್ ಇಟ್ಟುಕೊಂಡೇ ಇರಲಿಲ್ಲ! ಆ ಬಳಿಕವೂ ಮೊಬೈಲ್ ಬಳಕೆಯಲ್ಲಿ ಆತನದ್ದು ಹಿತ ಮಿತವೇ. ಈಗಂತೂ ಮೊಬೈಲ್, ಇಮೇಲ್ ಎಲ್ಲದರಿಂದ ದೂರವಾಗಿ ಟೀವಿ ಷೋ ಕಡೆಗೆ ಪೂರ್ಣ ಗಮನ ಕೇಂದ್ರೀಕರಿಸಿರುವುದು ಆತನ 'ಮೂಡಿ' ವ್ಯಕ್ತಿತ್ವಕ್ಕೆ ತಕ್ಕಂತೆಯೇ ಇದೆ.

ಅಮೀರ್ ಖಾಸಗಿ ವ್ಯಕ್ತಿಯಾಗಿಯೇ ಇರಲು ಯತ್ನಿಸುತ್ತಾರೆ. ಪ್ರಶಸ್ತಿ ಸಮಾರಂಭಗಳಿಗೆ ಬರುವುದಿಲ್ಲ; ಆ ಸಮಾರಂಭಗಳಲ್ಲಿ ವೇದಿಕೆಯ ಹಾಡಿ ಕುಣಿಯುವುದಿಲ್ಲ. ಕಳೆದ ವರ್ಷ ತ್ರೀ ಈಡಿಯಟ್ಸ್ ಸಿನಿಮಾದ ಯಶಸ್ಸಿನ ಬಳಿಕ ಯಾವುದೋ ಒಂದು ಸಮಾರಂಭದಲ್ಲಿ ಆತ ಕರೀನಾ ಜತೆಗೆ ಲೈವ್ ಷೋ ಒಂದರಲ್ಲಿ ಭಾಗವಹಿಸಿದ್ದ. ಅದೂ 10 ವರ್ಷಗಳ ಬಳಿಕ ಸ್ಟೇಜ್ ಷೋಗೆ ಬಂದದ್ದು! ಈಗ ಹೊಸ ಟೀವಿ ಷೋ ಸಲುವಾಗಿ ಭಾರತದಾದ್ಯಂತ ತಿರುಗಾಡಿ ಜನಸಾಮಾನ್ಯರ ಜತೆ ಮಾತನಾಡಿರುವ ಅಮೀರ್, ಷೋಗಾಗಿ ಸಾಕಷ್ಟು ಪೂರ್ವಸಿದ್ಧತೆಯನ್ನೂ ನಡೆಸಿದ್ದಾನಂತೆ. ಒಮ್ಮೆ ಸೆಟ್‌ಗೆ ಬೆಂಕಿ ಬಿದ್ದು ಪೂರ್ಣ ನಾಶವಾದರೂ ಮತ್ತೆ ಅಲ್ಲೇ ಸೆಟ್ ನಿರ್ಮಿಸಿ ಶೂಟಿಂಗ್ ಮುಂದುವರಿಸಿದ್ದಾನೆ.

'ಸಿನಿಮಾ ಅನುಭವಕ್ಕೂ ಟೀವಿ ಷೋ ಅನುಭವಕ್ಕೂ ಏನು ವ್ಯತ್ಯಾಸ?' ಎಂದು ಕೇಳಿದಾಗ ಅಮೀರ್ ಹೇಳಿದ್ದು– 'ತುಂಬ ವ್ಯತ್ಯಾಸಗಳಿವೆ. ಸಿನಿಮಾಗಳಲ್ಲಿ ನಾನು ಬೇರೆಯೇ ಒಂದು ಪಾತ್ರವಾಗಿದ್ದೆ. ಆದರೆ ಇಲ್ಲಿ ಟೀವಿ ಷೋನಲ್ಲಿ ನೀವು ನಿಜವಾದ ಅಮೀರ್‌ನನ್ನು ನೋಡುತ್ತೀರಿ..!' ಅಮೀರ್‌ನ ಹೊಸ ಷೋ ನೋಡಲು ಜನರಂತೂ ಕಾತರದಿಂದ ಕಾದು ಕುಳಿತಿದ್ದಾರೆ.

■ ಬಿಂದು